

ಏಷ್ಯಾ ಕಪ್ ಫುಟ್‌ಬಾಲ್ ಟೂರ್ನಿಗೆ ಅರ್ಹತೆ ಪಡೆದ ಭಾರತ ತಂಡ

# ಏಷ್ಯಾ ಕಪ್ ಫುಟ್‌ಬಾಲ್

## ಭಾರತದ ಮುನ್ನಡೆಯ ಗೋಲು

**2023ರಲ್ಲಿ ನಡೆಯುವ ಏಷ್ಯಾಕಪ್ ಫುಟ್‌ಬಾಲ್ ಟೂರ್ನಿಗೆ ಭಾರತ ತಂಡ ಮೊದಲ ಸಲ ಸತತ ಎರಡನೇ ಬಾರಿಗೆ ಅರ್ಹತೆ ಪಡೆದುಕೊಂಡಿದೆ. ಈ ಸಾಧನೆಗೆ ಕಾರಣವೇನು? ದೇಶಿ ಟೂರ್ನಿಗಳಿಂದ ಭಾರತದ ಕಾಲ್ಚಳಕದ ಸೊಬಗು ಬದಲಾಗಿದೆಯೇ?**

■ **ಪ್ರಮೋದ**

‘ಇನ್ನು ಮುಂದೆ ಪ್ರಾದೇಶಿಕ ಟೂರ್ನಿಗಳಲ್ಲಿ ಗೆಲ್ಲುವುದಷ್ಟೇ ನಮ್ಮ ಗುರಿಯಲ್ಲ. ಏಷ್ಯಾ ವಲಯದಲ್ಲಿ ಫುಟ್‌ಬಾಲ್ ಶಕ್ತಿಯಾಗಿ ಬೆಳೆಯಬೇಕು. ಸದ್ಯಕ್ಕೆ ಭಾರತ ತಂಡ ಜಾಗತಿಕ ಶಕ್ತಿಯಾಗಿಲ್ಲದೇ ಇರಬಹುದು; ಆದರೆ ಒಂದು ದಶಕದ ಹಿಂದಿನ ಸಾಮರ್ಥ್ಯಕ್ಕೆ ಹೋಲಿಸಿದರೆ ನಾವೀಗ ಕನಿಷ್ಠ ಒಂದು ಖಂಡದ ಶಕ್ತಿಯಾಗಿಯಾದರೂ ಬದಲಾಗುತ್ತಿದ್ದೇವೆ.’

2021ರಲ್ಲಿ ‘ಸೌತ್ ಏಷ್ಯನ್ ಫುಟ್‌ಬಾಲ್ ಫೆಡರೇಷನ್’ (ಸ್ಯಾಫ್) ಆಯೋಜಿಸಿದ್ದ ಟೂರ್ನಿಯಲ್ಲಿ ಚಾಂಪಿಯನ್ ಆದ ಬಳಿಕ ಭಾರತ ತಂಡದ ಮುಖ್ಯ ತರಬೇತುದಾರ ಇಗೊರ್ ಸ್ಟಿಮ್ಯಾಕ್ ಹೇಳಿದ ಮಾತುಗಳಿವು.

ಅವರ ಮಾತುಗಳಲ್ಲಿ ಉತ್ಪ್ರೇಕ್ಷೆಯಿರಲಿಲ್ಲ. ಯಾಕೆಂದರೆ, ಸ್ಯಾಫ್ ಟೂರ್ನಿಗಳಲ್ಲಿ ಹೆಚ್ಚು ಬಾರಿ ಪ್ರಶಸ್ತಿ ಜಯಿಸಿದ ರಾಷ್ಟ್ರಗಳಲ್ಲಿ ಭಾರತ ಅಗ್ರಸ್ಥಾನದಲ್ಲಿದೆ. 1993ರಲ್ಲಿ ಆರಂಭವಾದ ಟೂರ್ನಿ ಇದುವರೆಗೂ 13 ಬಾರಿ ನಡೆದಿದೆ. ಇದರಲ್ಲಿ ಎಂಟು ಸಲ ಭಾರತವೇ ಚಾಂಪಿಯನ್! ಹೀಗಾಗಿ ಸ್ಯಾಫ್ ರ್‍ಯಾಂಕಿಂಗ್‌ನಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ. ಮಾಲ್ಡೀವ್ಸ್, ನೇಪಾಳ, ಭೂತಾನ್, ಬಾಂಗ್ಲಾದೇಶ, ಪಾಕಿಸ್ತಾನ ಹಾಗೂ ಶ್ರೀಲಂಕಾ ತಂಡಗಳು ನಂತರದ ಸ್ಥಾನಗಳನ್ನು ಹೊಂದಿವೆ.

ಇದೇ ರೀತಿಯ ಪ್ರಾಬಲ್ಯವನ್ನು ಏಷ್ಯಾ ವಲಯದಲ್ಲಿಯೂ ಸಾಧಿಸಬೇಕು ಎನ್ನುವುದು ಭಾರತದ ಮುಂದಿನ ಗುರಿ. ಈ ದಿಸೆಯಲ್ಲಿ ಸುನಿಲ್ ಚೆಟ್ರಿ ನಾಯಕತ್ವದ ಭಾರತ ತಂಡ ದಿಟ್ಟ ಹೆಜ್ಜೆ ಇಟ್ಟಿದೆ. ಏಷ್ಯಾ ಕಪ್ ಟೂರ್ನಿಗೆ ಭಾರತ ಸತತ ಎರಡನೇ ಬಾರಿಗೆ ಅರ್ಹತೆ ಪಡೆದುಕೊಂಡಿದೆ. ವಿಶೇಷವೆಂದರೆ, ಸತತ ಎರಡನೇ ಬಾರಿ ಅರ್ಹತೆ ಪಡೆದುಕೊಂಡಿರುವುದು ಇದೇ ಮೊದಲು.

ಅರ್ಹತಾ ಟೂರ್ನಿಗಳಲ್ಲಿ ಭಾರತ ಆಡಿದ ಮೂರೂ ಪಂದ್ಯಗಳಲ್ಲಿ ಕ್ರಮವಾಗಿ ಹಾಂಕಾಂಗ್, ಅಫಘಾನಿಸ್ತಾನ ಮತ್ತು ಕಾಂಬೋಡಿಯಾ ತಂಡಗಳನ್ನು ಸೋಲಿಸಿದೆ. ಏಷ್ಯಾ ಕಪ್ ಪಂದ್ಯಾವಳಿ, 2023ರ ಜೂನ್ 1ರಿಂದ ಭರ್ತಿ ಒಂದು ತಿಂಗಳು ವಿವಿಧ ಸ್ಥಳಗಳಲ್ಲಿ ಆಯೋಜನೆಯಾಗಿದೆ.

ಏಷ್ಯಾದ ಮಟ್ಟಿಗೆ ದೊಡ್ಡ ಟೂರ್ನಿಯಾದ ‘ಏಷ್ಯಾ



ಭಾರತ ತಂಡದ ನಾಯಕ ಸುನಿಲ್ ಚೆಟ್ರಿ